# ವಾಣಿಜ್ಯ ಬೆಳೆಗಳ ಬೆಲೆ ಸ್ಥಿರೀಕರಣಕ್ಕೆ ಅನುದಾನ ಮೀಸಲು

## ವಿಟ್ಲ ಸಿಪಿಸಿಆರ್‌ಐನಲ್ಲಿ ಕೃಷಿ ಮೇಳ ಉದ್ಘಾಟಿಸಿ ಡಿ.ವಿ. ಸದಾನಂದ ಗೌಡ

ವಿಟ್ಲ, ಜ.10: ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಕೃಷಿಕರ ಸಂರಕ್ಷಣೆಗಾಗಿ ಬಜೆಟ್‌ನಲ್ಲಿ ವಿಶೇಷ ಅನುದಾನಗಳನ್ನು ಕಾಯ್ದಿರಿಸಿದೆ. ರೈತರ ಮೂಲ ಸೌಲಭ್ಯಗಳಿಗೆ ಅನುಕೂಲವಾಗುವಂತೆ ಉತ್ತರ ಈಶಾನ್ಯ ಭಾಗದಲ್ಲಿ 6 ಕೃಷಿ ವಿವಿಗಳನ್ನು ಸ್ಥಾಪಿಸಲಾಗುವುದು. ಆಹಾರೋತ್ಪನ್ನಗಳಿಗೆ ಸರಕಾರ ಮಧ್ಯ ಪ್ರವೇಶಿಸುವಂತೆ ವಾಣಿಜ್ಯ ಬೆಳೆಗಳ ಬೆಲೆ ಸ್ಥಿರೀಕರಣಕ್ಕೆ ಅನುದಾನ ಕಾಯ್ದಿರಿಸಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.



ವಿಟ್ಲ: ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ)ಯಲ್ಲಿ ನಡೆದ ಕೃಷಿ ಮೇಳ-2015ನ್ನು ಕೇಂದ್ರ ಕಾನೂನು ಸಚಿವ ಡಿ. ವಿ. ಸದಾನಂದ ಗೌಡ ಉದ್ಘಾಟಿಸಿದರು.

ಅವರು ಶನಿವಾರ ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ)ಯಲ್ಲಿ ನಡೆದ ಕೃಷಿ ಮೇಳ-2015ನ್ನು ಉದ್ಘಾಟಿಸಿ ಮಾತನಾಡಿದರು.

**ಆಮದು ಬಂದ್**

ನೇಪಾಳದಿಂದ ಅಡಿಕೆ ಆಮದಾಗುವುದನ್ನು ತಡೆಹಿಡಿಯಲಾಗಿದೆ. ಮಲೇಶ್ಯಾ ಮೊದಲಾದ ವಿದೇಶಗಳಿಂದ ಆಗಮಿಸುತ್ತಿದ್ದ ಕಡಿಮೆ ಬೆಲೆಯ ಕಳಪೆ ಅಡಿಕೆಗೆ ಆಮದು ಸುಂಕ ಹೆಚ್ಚಿಸಲಾಗಿದೆ. ಅಡಿಕೆ ಆಮದಾಗುವ ಎಲ್ಲ ಗಡಿಗಳನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಹಂತ ಹಂತವಾಗಿ ಅಡಿಕೆ ಆಮದನ್ನು ತಡೆಹಿಡಿಯಲಾಗುತ್ತದೆ. ಬೆಳೆಗಾರರು ಭಯಭೀತರಾಗುವ ಆವಶ್ಯಕತೆಯಿಲ್ಲ. 275 ರೂ.ಗಳ ಧಾರಣೆ ಸ್ಥಿರವಾಗಿ ಉಳಿಯುವಂತೆ ಪ್ರಯತ್ನ ಮಾಡಲಾಗಿದೆ ಎಂದು ಸಮರ್ಥಿಸಿಕೊಂಡರು.

**ಅಡಿಕೆ ಬೆಳೆಗಾರರ ರಕ್ಷಣೆಗಾಗಿಯೇ ಕಾನೂನು ಖಾತೆ ಲಭಿಸಿತು**

ಅಡಿಕೆ ಹಾನಿಕಾರಕ ಎಂಬ ಗುಲ್ಲೆಬ್ಬಿಸಿ, ಹಾನಿ ಮಾಡಲೆತ್ನಿಸಲಾಯಿತು. ನ್ಯಾಯಾಲಯದ ಮೆಟ್ಟಿಲೇರಿಯೂ ಆಗಿತ್ತು. ಅಡಿಕೆ ಆರೋಗ್ಯಕ್ಕೆ ಪೂರಕ ಎಂಬ ವಿಚಾರದಲ್ಲಿ ಚೆನ್ನೈ ಮೆಡಿಕಲ್ ಸೆಂಟರ್ ವರದಿ ನೀಡಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ 17ರಂದು ಅಡಿಕೆ ಪ್ರಕರಣ ಪ್ರಸ್ತಾಪವಾಗಲಿದ್ದು ಹಾನಿಕಾರಕವಲ್ಲ ಎಂದು ಸಮರ್ಥಿಸಲು ಕ್ರಮ ಕೈಗೊಳ್ಳಲಾಗಿದೆ. ಕಾನೂನು ಸಚಿವನಾಗಿ ಎಲ್ಲ ಇಲಾಖೆಗಳ ಮತ್ತು ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಅವರ ಉಪಸ್ಥಿತಿಯಲ್ಲಿ ಸಭೆ ಕರೆದು ಈ ಬಗ್ಗೆ ನ್ಯಾಯಯುತ ಹೋರಾಟ ಮಾಡಲು ಸಿದ್ಧರಾಗಿದ್ದೇವೆ. ಇದಕ್ಕಾಗಿ ವಿಶೇಷ ಕಮಿಟಿ ರಚಿಸಲಾಗಿದೆ. ಅಡಿಕೆ ಬೆಳೆಗಾರರ ರಕ್ಷಣೆಗಾಗಿಯೇ ತನಗೆ ಕಾನೂನು ಖಾತೆ ಲಭಿಸಿರಬೇಕು. ಆ ಕಾರಣಕ್ಕೆ ತಾನು ಅಡಿಕೆ ಬೆಳೆಗಾರರ ಹಿತಾಸಕ್ತಿಗೆ ಬದ್ಧನಾಗಿದ್ದೇನೆ. ಉಪಬೆಳೆ ರಬ್ಬರ್ ಧಾರಣೆಯ ಕುಸಿತವನ್ನು ತಡೆಗಟ್ಟಲು ಆಮದು ಸುಂಕವನ್ನು ಏರಿಸುವ ಕ್ರಮಕೈಗೊಳ್ಳುವ ಹಾಗೂ ಕೇಂದ್ರ ಪರಿಶೀಲಿಸುವ ಭರವಸೆ ನೀಡಿದರು.

**ರೈತ ಸ್ನೇಹಿಯಾಗಿರಲಿ**

ಸಂಶೋಧನಾ ಕೇಂದ್ರಗಳು ಜನಸ್ನೇಹಿಯಾಗಿ, ರೈತ ಸ್ನೇಹಿಯಾಗಿರಬೇಕು. ನಿತ್ಯ ಕೃಷಿಕರು ಇಲ್ಲಿಗೆ ಭೇಟಿ ನೀಡಿ ಸಲಹೆ ಪಡೆಯುವಂತಾಗಬೇಕು. ರೈತರ ಸಮಸ್ಯೆಗಳು, ಅವರ ಬೇಡಿಕೆಗಳು ಸರಕಾರಕ್ಕೆ ಮುಟ್ಟಿಸುವ ಕೆಲಸವನ್ನು ಕೃಷಿ ಸಂಶೋಧನಾ ಸಂಸ್ಥೆ ಮಾಡಬೇಕು. ಮೂರು ತಿಂಗಳಿಗೊಮ್ಮೆ ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ, ಕೇಂದ್ರಕ್ಕೆ ವರದಿ ನೀಡುವ ಕಾರ್ಯವಾಗಬೇಕು.

ಸಂಶೋಧನಾ ಕೇಂದ್ರದಲ್ಲಿ ಮಾತ್ರ ಪ್ರಯೋಗಗಳು ನಡೆಯುವ ಬದಲಾಗಿ, ರೈತರ ಹೊಲದಲ್ಲೂ ಪ್ರಾತ್ಯಕ್ಷಿಕೆಗಳು ನಡೆಯಬೇಕು. ಅನುಭವೀ ಅಡಿಕೆ ಕೃಷಿಕರನ್ನು ಸೇರಿಸಿಕೊಂಡೇ ಸಂಶೋಧನೆಗೆ ತೊಡಗಿಕೊಳ್ಳಬೇಕು ಎಂದರು.

ಪುತ್ತೂರು ಶಾಸಕಿ ಶಕುಂತಳಾ ಶೆಟ್ಟಿ ಅಧ್ಯಕ್ಷತೆ ವಹಿಸಿ, ಮಾತನಾಡಿ ಕೃಷಿರೋಗಗಳ ವಿಚಾರದಲ್ಲಿ ವಿಜ್ಞಾನಿಗಳಿಗಿಂತ ಕೃಷಿಕರಿಗೆ ಅಧಿಕ ಅನುಭವ, ಮಾಹಿತಿ ಇದ್ದು, ಸಂಶೋಧನೆಯಲ್ಲಿ ಅವರನ್ನೂ ತೊಡಗಿಸಿಕೊಳ್ಳುವ ಅವಶ್ಯಕತೆ ಇದೆ. ರಬ್ಬರ್ ಬೆಳೆಗಾರರು ರಬ್ಬರ್ ಶೀಟ್‌ಗಳ ಮೇಲೆ ಮಲಗುವ ಪರಿಸ್ಥಿತಿ ಉದ್ಭವಿಸಿದೆ. ಆಮದು ರಬ್ಬರಿಗೆ ಶೇ. 70 ತೆರಿಗೆ ವಿಧಿಸುವ ಮೂಲಕ ರಬ್ಬರ್

ಪುಟ 4...

### ಪ್ರಥಮ ಬಾರಿ ಸಿಪಿಸಿಆರ್‌ಐ ಪ್ರವೇಶ

ಇಲ್ಲಿನ ಸಂಶೋಧನೆ ಮಾಡುತ್ತಿದ್ದ ವಿಜ್ಞಾನಿಗಳು ಜನಪ್ರತಿನಿಧಿಗಳನ್ನು ಅಥವಾ ರೈತರನ್ನು ಹೆಚ್ಚು ಒಟ್ಟುಗೂಡಿಸಿ, ಕಾರ್ಯಕ್ರಮ ಏರ್ಪಡಿಸುತ್ತಿರಲಿಲ್ಲ. ತನಗೆ ಈವರೆಗೆ ಇಲ್ಲಿನ ಯಾವುದೇ ಕಾರ್ಯಕ್ರಮಗಳಿಗೆ ಕರೆಯಲಿಲ್ಲ. ಇದೇ ಪ್ರಥಮ ಬಾರಿಗೆ ಕರೆಯಲಾಗಿದೆ. ಆದುದರಿಂದ ಸಂಸ್ಥೆಯ ಜತೆ ತನಗೂ ಜವಾಬ್ದಾರಿ ಹೆಚ್ಚಿದೆ. ಆದುದರಿಂದ ಈ ಸಂಸ್ಥೆಯು ಮುಂದಿನ ದಿನಗಳಲ್ಲಿ ಕೃಷಿಕರ ಸಮ್ಮುಖದಲ್ಲಿ ಪ್ರಯೋಗಗಳನ್ನು ಮಾಡುವಂತಾಗಲಿ. – ಡಿ.ವಿ. ಸದಾನಂದ ಗೌಡ

ಇದಕ್ಕೆ ದನಿಗೂಡಿಸಿದ ಶಾಸಕಿ ಶಕುಂತಳಾ ಟಿ.ಶೆಟ್ಟಿ ಅವರು ತನಗೂ ಇದೇ ಪ್ರಥಮ ಬಾರಿಗೆ ಇಲ್ಲಿನ ಕೃಷಿ ಮೇಳಕ್ಕೆ ಆಹ್ವಾನಿಸಿದ್ದಾರೆ ಎಂದರು.

### ಅಡಿಕೆ ವಿಸ್ತರಣೆ

ಅಡಿಕೆ ಬೆಳೆ ವಿಸ್ತರಣೆಯಾಗಿದೆ. 1971ರಲ್ಲಿ 0.167 ಮಿಲಿಯನ್ ಹೆಕ್ಟೇರ್ ಜಮೀನಿನಲ್ಲಿದ್ದ ಅಡಿಕೆ ಇದೀಗ 0.451 ಮಿಲಿಯನ್ ಹೆಕ್ಟೇರ್(ನಾಲ್ಕು ಪಟ್ಟು) ಏರಿದೆ. ರಾಜ್ಯದಲ್ಲಿ ಶೇ 60ರಷ್ಟು ಭಾಗದಲ್ಲಿ ಅಂದರೆ 16 ಜಿಲ್ಲೆಗಳಲ್ಲಿ ಅಡಿಕೆ ಬೆಳೆಯಲಾಗುತ್ತದೆ. ಅತೀ ಹೆಚ್ಚು ತೆರಿಗೆ ಸಂಗ್ರಹವಾಗುವುದು ಅಡಿಕೆ ಕೃಷಿಯಲ್ಲಿ. 1971ರಲ್ಲಿ ಪ್ರತಿ ಹೆಕ್ಟೇರ್‌ಗೆ ಅಡಿಕೆ ಉತ್ಪಾದನೆಯಾಗುತ್ತಿದ್ದುದು 843 ಕೆ.ಜಿ., ಆದರೆ ಇಂದು 1,386 ಕೆ.ಜಿ. ಅಡಿಕೆ ಉತ್ಪಾದನೆಯಾಗುತ್ತಿದೆ. ದೇಶದ ಅಭಿವೃದ್ಧಿ ಬಹುಜನರ ಆಧಾರಿತ ಕೃಷಿಯಿಂದಲೇ ಆಗಿದೆ. ಶೇ.65ರಷ್ಟು ಮಂದಿ ಕೃಷಿಕರ ಬಗ್ಗೆಯೂ ಸರಕಾರ ವಿಶೇಷ ಮುತುವರ್ಜಿ ವಹಿಸಿದೆ.

– ಡಿ.ವಿ. ಸದಾನಂದ ಗೌಡ